ಅಧ್ಯಕ್ಷರು: ಆಯಿತು, ಮಾಡೋಣ.

ಆ) ಸ್ಟೇಟ್ ಇಂಟಲಿಜೆನ್ಸ್ ಬ್ಯೂರೋದವರು ಸದಸ್ಯರ, ಪತ್ರಿಕೊದ್ಯಮಿಗಳ ಚಲನವಲನದ ಬಗ್ಗೆ ಕಣ್ಣಿಟ್ಟಿರುವುದು.

+ ಶ್ರೀಮತಿ ಪ್ರಮೀಳ ನೇಸರ್ಗಿ: ಅಧ್ಯಕ್ಷರೇ ನಾನು ತಮ್ಮ ಅನುಮತಿಯನ್ನು ಒಂದು ಮುಖ್ಯವಾದ ವಿಷಯದ ಬಗ್ಗೆ ಪ್ರಸ್ತಾಪಿಸಲು ಕೇಳಿದ್ದೆ. ಒಂದು ಬಹಳ ಗಂಭೀರವಾದಂಥ ವಿಷಯ ಪತ್ರಿಕೆಯಲ್ಲಿ ಬಂದಿದೆ. ಅದೇನೆಂದರೆ, "SIB Keeps tab of journalists" ಅಂದರೆ ಸ್ಟೇಟ್ ಇಂಟಲಿಜೆನ್ಸ್ ಬ್ಯೂರೋದವರು ಈ ಸಭೆಯಲ್ಲಿರತಕ್ಕಂಥ ಸದಸ್ಯರ ಮೇಲೆ, ಪತ್ರಿಕೋದ್ಯೋಗಿಗಳ ಮೇಲೆ, ಅವರ ಚಲನವಲನಗಳ ಮೇಲೆ ಕಣ್ಣು ಇಟ್ಟಿದೆ. ವಿಧಾನಸೌಧದ ಒಳಗಡೆಗೆ ಪಾಸ್‌ಗಳನ್ನು ಇಲ್ಲದೆ ಬಿಡುತ್ತಿದ್ದಾರೆ ಎನ್ನತಕ್ಕಂಥ ಗಂಭೀರವಾದ ವಿಷಯ ಬಂದಿದೆ. ನಾವು ಇಲ್ಲಿ ಸ್ವತಂತ್ರವಾಗಿ ಕೆಲಸ ಮಾಡಬೆಕಾದರೆ, ನಾವು ಶಾಸಕರು ತಮ್ಮ ಕೆಲಸ ಮಾಡಬೇಕಾದರೆ, ಪತ್ರಿಕೋದ್ಯೋಗಿಗಳು ಸ್ವಾತಂತ್ರದಿಂದ ಕೆಲಸ ಮಾಡಬೇಕಾದರೆ ಅವರ ಚಲನವಲನಗಳ ಮೇಲೆ ಈ ವಿಧಾನಸೌಧದ ಲಾಬಿಗಳಲ್ಲಿ ಕಣ್ಣು ಇಟ್ಟರೆ ನಾವು ಹೇಗೆ ಕೆಲಸ ಮಾಡಬೇಕು? ತಾವು ಇದರ ಬಗ್ಗೆ ಗಂಭೀರವಾಗಿ ಪರಿಶೀಲಿಸಬೇಕು. ಬ್ಯಾಡ್ಜ್‌ಗಳು ಇಲ್ಲದೆ ಇರುವವರಿಗೆ ಪಾಸ್ ಕೊಡುತ್ತಿದ್ದಾರೆ ಎನ್ನತಕ್ಕಂಥ ವಿಷಯ ಕೂಡ ಬಂದಿದೆ. ಇದು ಬಹಳ ಗಂಭೀರವಾದ ವಿಷಯ. ನಮ್ಮ ಶಾಸಕರ ಕಾರ್ಯಾಲಯದಿಂದಲೇ ಈ ರೀತಿಯಾಗುತ್ತಿದೆ ಎಂದರೆ ನಾವು ಹೇಗೆ ಕೆಲಸ ಮಾಡಬೇಕು ಎನ್ನುವುದರ ಕಡೆಗೆ ತಾವು ಗಮನ ಹರಿಸಬೇಕು. ಅಧ್ಯಕ್ಷರೇ, ನಾನು ಎರಡು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ, ಬ್ಯಾಡ್ಜಸ್ ಇಲ್ಲದೆ ಈ ಲಾಬಿಯೊಳಗೆ ಬಿಡುತ್ತಿದ್ದಾರಾ? ಅಸೆಂಬ್ಲಿ ಲಾಬಿಯೊಳಗೆ ಆ ಕಡೆ, ಈ ಕಡೆ ಮತ್ತು ಪತ್ರಿಕೋದ್ಯೋಗಿಗಳು ಕುಳಿತುಕೊಳ್ಳತಕ್ಕಂಥ ಸ್ಥಳದಲ್ಲಿ ಬ್ಯಾಡ್ಜಸ್ ಇಲ್ಲದೇ ಇರುವವರನ್ನು, ಪತ್ರಿಕೋದ್ಯೋಗಿಗಳು ಅಲ್ಲದವರನ್ನು ಸ್ಟೇಟ್ ಇಂಟೆಲಿಜೆನ್ಸ್, ಬ್ಯೂರೋನವರು ಆ ನೆಪದಲ್ಲಿ ಒಳಗೆ ಬಂದು ಕುಳಿತುಕೊಂಡು ನಾವು ಆ ಕಡೆ ಈ ಕಡೆ ಏನು ಮಾತನಾಡುತ್ತೇವೆ ಎನ್ನುವುದನ್ನು ಕೇಳಿಕೊಂಡು, ನಾವು ಹೋಗಿಬರತಕ್ಕ ಚಲನವಲನವನ್ನು ಗಮನಿಸುತ್ತಿದ್ದಾರೆ ಎಂದರೆ ಇದು ದುಃಖಕರವಾದಂಥ ವಿಷಯ. ನಿಜವಾಗಿಯೂ ನಮ್ಮ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬಂದಿದೆ. ಸ್ಟೇಟ್ ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನಿಂದಲೇ ಈ ರೀತಿ ಮಾಡುತ್ತಿದ್ದಾರೆ ಎಂದರೆ ನಮಗೆ ಬಹಳ ದುಃಖವಾಗುತ್ತಿದೆ. ಆದ್ದರಿಂದ, ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇದನ್ನು ಗಂಭೀರವಾಗಿ ಪರಿಗಣಿಸಬೇಕು, ಇದರಿಂದ ಏನಾಗುತ್ತದೆ ಎಂದು ನೀವು ಯೋಚನೆ ಮಾಡಬೇಕು. ಬ್ಯಾಡ್ಜ್ ಇಲ್ಲದವರಿಗೆ ಯಾರ್ಯಾರಿಗೆ ಪಾಸ್‌ಗಳನ್ನು ಕೊಡುತ್ತಿದ್ದಾರೆ, ಬ್ಯಾಡ್ಜ್ ಇಲ್ಲದೆ ಇಲ್ಲಿ ಯಾರು ಕುಳಿತುಕೊಂಡಿದ್ದಾರೆ, ಅವರೆಲ್ಲರನ್ನೂ ಕೂಡ ಹೊರಗೆ ಕಳುಹಿಸತಕ್ಕಂಥ ಕೆಲಸವನ್ನು ತಾವು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ನನಗೆ ನೀವು ಇದನ್ನು ಊಹೆಯ ಮೇಲೆ ಮಾತನಾಡುತ್ತಿದ್ದೀರಿ ಎಂದು ಅನ್ನಿಸುತ್ತದೆ.

ಶ್ರೀಮತಿ ಪ್ರಮೀಳ ನೇಸರ್ಗಿ: ಇಲ್ಲ ಅಧ್ಯಕ್ಷರೇ, ತಾವೂ ಸ್ವಲ್ಪ ವಿಚಾರ ಮಾಡಬೇಕು. ಏಕೆಂದರೆ ಇದು ಅವರಿಗೂ ಗೊತ್ತಿದೆ.

ಅಧ್ಯಕ್ಷರು: ನಾವು ಎಂಟ್ರಯನ್ನು ರೆಗ್ಯುಲೇಟ್ ಮಾಡಿದ್ದೇವೆ. ಅಫಿಷಿಯಲ್ ಗ್ಯಾಲರಿಗೆ ಬರತಕ್ಕಂಥವರು ಬ್ಯಾಡ್ಜಸ್ ಹಾಕಿಕೊಂಡು ಬರಬೇಕು ಎಂದು ಹೇಳಿದ್ದೇವೆ. ಅನಗತ್ಯವಾಗಿ ಎಲ್ಲರೂ ಬಂದು ಕೂಡುವುದು ಬೇಡ ಎಂದು ಹೇಳಿದ್ದೇವೆ. ಈ ಕಡೆಗೆ ಅಕ್ರೆಡಿಟೇಷನ್ ಕಾರ್ಡ್ ಇದ್ದವರು ಮಾತ್ರ ಬರುತ್ತಾರೆ. ಇಲ್ಲಿ ಆಯ್ಕೆಯಾದವರು ಮಾತ್ರ ಬರುತ್ತಾರೆ. ಹೊರಗಡೆ ಲಾಂಜಿನಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲಾ ನಮ್ಮ ಎಂಎಲ್ಎ ಗಳನ್ನು ಸಹಕರಿಸಿ ಎಂದು ಹೇಳಿ, ಈ ಮೂರೂ ಗುಂಪಿಗೆ ಸೇರದವರು ಯಾರೂ ಹೆಚ್ಚಿಗೆ ಬರದಂತೆ ನೋಡಿಕೊಂಡಿದ್ದೇವೆ. ಒಂದು ವೇಳೆ ಯಾರಾದರೂ ಬಂದಿದ್ದರೆ, I will ask my Secretariat, immediately to get the information to-day itself, because I must answer this question. ಸರ್ಕಾರ ಇದಕ್ಕೆ ಉತ್ತರ ಕೊಡುವುದಕ್ಕೆ ಏನೂ ಇರುವುದಿಲ್ಲ. ಇಂಟೆಲಿಜೆನ್ಸ್‌ನವರು ಅವರು ಇವರು ಕರ್ತವ್ಯದ ಮೇಲೆ ಬಂದಿದ್ದರೆ that is a different thing. ಆದರೆ ನಿಗಾ ಇಡಲು, ಪಹರೆ ಮಾಡಲು ಬಂದಿದ್ದರೆ, I will definitely take suitable action. You don't have to worry about it.

ಶ್ರೀಮತಿ ಪ್ರಮೀಳ ನೇಸರ್ಗಿ: ಇದು ಬಹಳ ಗಂಭೀರವಾದ ವಿಷಯ. ಬ್ಯಾಡ್ಜಸ್‌ಗಳನ್ನು ಕೊಟ್ಟಂಥವರು ಬರತಕ್ಕಂಥಾದ್ದು ಸಹಜ, ಅದನ್ನು ನೋಡಿದ್ದೇನೆ. ಆದರೆ ಬ್ಯಾಡ್ಜಸ್ ಇಲ್ಲದವರನ್ನು ಒಳಗೆ ಬರಲು ಬಿಡುತ್ತಿದ್ದಾರೆ. ಬ್ಯಾಡ್ಜಸ್ ಇಲ್ಲದೇ ಕುಳಿತಿದ್ದಾರೆ.

Mr. SPEAKER: I will look into it. I will look into it. ಅವರು ಇಲ್ಲಿ ಓಡಾಡುತ್ತಿದ್ದರೆ, ಖಂಡಿತಾ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀಮತಿ ಪ್ರಮೀಳ ನೇಸರ್ಗಿ: ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದನ್ನು ಕಳುಹಿಸಿ ಕೊಡುತ್ತಿದ್ದೇನೆ. ಪತ್ರಿಕೆಯಲ್ಲಿ ಇದರ ಬಗ್ಗೆ ಪೂರ್ಣ ವಿವರಗಳನ್ನು ಕೊಟ್ಟಿದೆ. ಯಾರು ಹೇಳಿ ಕಳುಹಿಸುತ್ತಿದ್ದಾರೆ? ಯಾರಿಗೋಸ್ಕರ ಮಾಡುತ್ತಿದ್ದಾರೆ? ಯಾವ ರೀತಿ ಮಾಡುತ್ತಿದ್ದಾರೆ ಎಂಬುದು ಬಂದಿದೆ.

ಅಧ್ಯಕ್ಷರು: ಯಾವ ಪತ್ರಿಕೆ ಅದು? ದಯವಿಟ್ಟು ಕಳುಹಿಸಿ ಕೊಡಿ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೇ, ಶ್ರೀಮತಿ ಪ್ರಮೀಳಾರವರು ಒಂದು

ಮಾತನ್ನು ಆಡಿದರು, ಸ್ಟೇಟ್ ಇಂಟೆಲಿಜಿನ್ಸ್ ಬ್ಯೂರೋದಿಂದ, ಅವರ ಅಧಿಕಾರಿಗಳನ್ನು ಸದನದ ಒಳಗಡೆ ಮತ್ತು ಹೊರಗಡೆ ನಮ್ಮ ಲಾಬಿಗಳಲ್ಲಿ ಶಾಸಕರ ಚಲನವಲಗಳನ್ನು ನೋಡಲಿಕ್ಕೋಸ್ಕರ, ಏನು ಮಾತನಾಡುತ್ತಾರೆ ಎಂದು ಕೇಳುವುದಕ್ಕೋಸ್ಕರ ಎಲ್ಲೋ ಒಂದು ಕಡೆ ಗುಪ್ತವಾಗಿ ಕೆಲಸವನ್ನು ಮಾಡುತ್ತಿದ್ದಾರೆ ಎನ್ನುವ ಮಾತನ್ನು ಆಡಿದರು. ನೇರವಾಗಿ ನಾನು ಈ ಸದನದಲ್ಲಿ ಆಶ್ವಾಸನೆಯನ್ನು ಕೊಡುತ್ತೇನೆ, ಸ್ಟೇಟ್ ಇಂಟೆಲಿಜಿನ್ಸ್ ಬ್ಯೂರೋ ಆಗಲೀ ಅಥವಾ ಇನ್ಯಾವುದೇ ಗುಪ್ತಾಚಾರ ಇಲಾಖೆಯಾಗಲೀ ನಮ್ಮ ಶಾಸಕರ ಚಲನವಲನಗಳನ್ನು ನೋಡಲು, ಅವರು ಮಾತನಾಡುವಂಥಾದ್ದನ್ನು ಕೇಳಿಸಿಕೊಂಡು ಅದನ್ನು ವರದಿ ಮಾಡುವಂಥ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದಾಗಲೀ, ಇಲಾಖೆಯ ವತಿಯಿಂದಾಗಲೀ, ಇಂಟೆಲಿಜೆನ್ಸ್ ಬ್ಯೂರೋದಿಂದಾಗಲೀ ಮಾಡುತ್ತಿಲ್ಲ, ಮಾಡುವ ಅವಶ್ಯಕತೆಯೂ ಇಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ, ತಾವು ಮಾಡಿರತಕ್ಕಂಥ ಆರೋಪ ಏನಿದೆ, ಅದು ಬಹುಶಃ ಊಹೆಯ ಮೇಲೆ ಮಾಡುತ್ತಿದ್ದೀರಿ.

ಅಧ್ಯಕ್ಷರು: ನಾಣಯ್ಯನವರೇ ಒಂದು ನಿಮಿಷ. She is a very, very clever woman. ನಾನು ಕೇಳಿದೆ ಪತ್ರಿಕೆಯ ಹೆಸರು ಏನು ಎಂದು; ಅವರು ಹೇಳಲೇ ಇಲ್ಲ. Its name is 'Corridor News'. It is alright. There is no worry about it. It is a corridor news.

SRI H.N.NAGEGOWDA: News is a news.

SRI M.C.NANAIAH: It has no basis.

ಶ್ರೀಮತಿ ಪ್ರಮೀಳ ನೇಸರ್ಗಿ: ಬೇಸಿಸ್ ಇಲ್ಲ ಎಂದರೆ ನನಗೆ ಸಂತೋಷವಾಗುತ್ತದೆ. ಆದರೆ ಈ ರೀತಿ ಹೊಗೆಯಾಡುತ್ತಿರಬೇಕಾದರೆ ಬೆಂಕಿ ಇರಬೇಕಲ್ಲವೇ?

SRI M.C.NANIAH: On behalf of the government let me give an assurance. Absolutely, there is nothing and that news item is a baseless thing.

ಶ್ರೀ ಹೆಚ್.ಎನ್.ನಂಜೇಗೌಡ: ಪ್ರಮಿಳಾರವರೇ, ಇದಕ್ಕೆ ಗಾಭರಿಗೊಳ್ಳಬೇಡಿ. ಯಾರಾದರೂ ಇಂಟೆಲಿಜೆನ್ಸ್‌ನವರು ಬಂದರೆ ನಮ್ಮ ಚಲನವಲನವನ್ನು ನೋಡುವುದಿಲ್ಲ ಅವರಲ್ಲೇನಾದರೂ ಡಿಸಿಡೆಂಟ್ ಆಕ್ಟಿವಿಟೀಸ್ ಇದ್ದರೆ ಅದರ ಬಗ್ಗೆ ಏನಾದರೂ ಮಾತನಾಡುತ್ತಾರೇನೋ ಎಂದು ಕೇಳಿಸಿಕೊಳ್ಳಲು ಬರುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ ಅದು ಇರಬೇಕಾದದ್ದಿಲ್ಲ. ಇದ್ದರೆ ನಾವೇ ಅದನ್ನು ಮಾಡಿಕೊಳ್ಳುತ್ತೇವೆ. ಅವರ ಮುಖಾಂತರ ಬೇಕಾಗಿಲ್ಲ.

ಅಧ್ಯಕ್ಷರು: ನನಗೆ ಗೊತ್ತಿಲ್ಲ, ಯಾರ್ಯಾರ ಸಂಬಂಧಗಳು ಎಲ್ಲಿರುತ್ತವೆಯೋ? ನಾವು ಹೇಗೆ ಹೇಳುವುದು?

ಶ್ರೀ ವಾಟಾಳ್ ನಾಗರಾಜ್: ಆ ರೀತಿ ಗುಪ್ತದಳದವರು ಇಲ್ಲಿ ಬರುವ ಹಾಗೇ ಇಲ್ಲ. ಕಾನೂನು ಪ್ರಕಾರ ಅವರು ಬರುವ ಪ್ರಶ್ನೆಯೇ ಇಲ್ಲ. ಯಾರು ಬಂದು ಕುಳಿತಿರುತ್ತಾರೋ ಬಿಡುತ್ತಾರೋ, ಅದು ಬೇರೆ. ಅವರು ಬರುವುದಕ್ಕೆ ಅವಕಾಶವೇ ಇಲ್ಲ. ಹಿಂದೆಯೆಲ್ಲಾ ಇಂಥ ಸಂದರ್ಭ ಬಂದಾಗ ಕುಳಿತಿದ್ದಂಥ ಅವರು ಎದ್ದು ಹೋಗಿಬಿಡುತ್ತಿದ್ದರು. ಅಂಥ ಸಂದರ್ಭ ಉಂಟು. ಆದ್ದರಿಂದ ಇಲ್ಲಿ ಬರಲು ಸಾಧ್ಯವೇ ಇಲ್ಲ. ಆದರೂ ಬರುತ್ತಿದ್ದಾರೆ. ಅವರನ್ನು ನಾವು ತಡೆಯಲು ಆಗುತ್ತಿಲ್ಲ. ಹಾಗೆ ಆಗಿದೆ.

ಅಧ್ಯಕ್ಷರು: ನನಗೆ ಏನು ಸಮಸ್ಯೆ ಬಂದಿದೆ ಎಂದರೆ, ಗುಪ್ತದಳದವರು ಯಾರು ಎಂಬುದು ನನಗೆ ಗೊತ್ತಿಲ್ಲ. ಗುಪ್ತವಾಗಿಯಾದರೂ ಇಂಥವರು ಬರುತ್ತಿದ್ದಾರೆ ಎಂದು ನೀವು ನನಗೆ ತಿಳಿಸಿದರೆ ನಾನು ಅದರ ಕಡೆ ಗಮನ ಹರಿಸುತ್ತೇನೆ. ನಿಮಗೆ ಪರಿಚಯ ಇದೆ. ನೀವು ಹೇಳುತ್ತೀರಿ. ನನಗೆ ಐಡಿಯಾನೇ ಇಲ್ಲ. ಅವರು ಯಾರು ಎಂದು.

ಶ್ರೀ ವಾಟಾಳ್ ನಾಗರಾಜ್: ಅವರು ಬರುವುದರಿಂದ ನನಗಾಗಲೀ, ನಂಜೇಗೌಡರಿಗಾಗಲಿ ತೊಂದರೆಯೇನಿಲ್ಲ. ಅದರ ಬಗ್ಗೆ ನಾವೇನೂ ತಲೆ ಕೆಡಿಸಿಕೊಂಡಿಲ್ಲ ತಾವೇನೋ ಹೇಳಿದಿರಲ್ಲಾ, ಅದರ ಬಗ್ಗೆ, ನಿಮಗೇನಾದರೂ ಬೇಕಾದರೆ ನಾವು ಗುರುತು ಮಾಡಿಕೊಡುತ್ತೇವೆ.

ಅಧ್ಯಕ್ಷರು: ನಿಮ್ಮಿಬ್ಬರಿಗೂ ತೊಂದರೆಯಾಗದಿದ್ದ ಮೇಲೆ ನನಗೇನು ತೊಂದರೆಯಾಗುತ್ತದೆ.

ಮಾನ್ಯ ಸದಸ್ಯರು: ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ಬರುವವರು ಸನ್ಮಾನ್ಯ ಹಿರಿಯ ಸದಸ್ಯರಿಗೆ ಹೇಳಿ ಬಂದಿದ್ದಾರೆ ಎಂದು ಕಾಣುತ್ತದೆ.

ಅಧ್ಯಕ್ಷರು: ಈಗ ಶ್ರೀ ಅಲ್ಲಂ ವೀರಭದ್ರಪ್ಪನವರು ತಾವು ಪ್ರಸ್ತಾಪ ಮಾಡಿ. ಅದಕ್ಕಿಂತ ಮುಂಚೆ ಒಂದು ನಿಮಿಷ, ಯಡಿಯೂರಪ್ಪನವರು ಯಾವುದೋ ಒಂದು ವಿಷಯ ಹೇಳುತ್ತಾರೆ.

(ಇ) ಗುಲ್ಬರ್ಗಾ ಜಿಲ್ಲೆಯ ಆಳಂದ ಮತ್ತು ಸೇಡಂನಲ್ಲಿ ಖೂನಿಯಾಗಿರುವ ವಿಚಾರ.

+ ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಆಗಸ್ಟ್ 18ನೇ ತಾರೀಖು ಶಹಾಪುರದಲ್ಲಿ ಹರಿಜನ ಯುವಕನೊಬ್ಬ ಸವರ್ಣೀಯ ಯುವತಿಯನ್ನು ಕೀಟಲೆ ಮಾಡಿದೆ. ಆ ಘಟನೆಯ ಹಿನ್ನೆಲೆಯಲ್ಲಿ ಗೋಲೀಬಾರ್ ನಡೆದು ಒಬ್ಬ ವ್ಯಕ್ತಿ ಸತ್ತಿರುವಂಥಾದ್ದು ಅನೇಕ ಯುವಕರಿಗೆ ತೀವ್ರ ಗಾಯವಾಗಿರುವಂಥಾದ್ದು, ಸವರ್ಣೀಯ ಯುವಕ ಭೀಮಣ್ಣ ಎನ್ನುವವನು ಸಾವಿಗೀಡಾಗಿರುವಂಥಾದ್ದು, ಅಲ್ಲಿ ಒಂದು ಪ್ರಕ್ಷುಬ್ಧ ವಾತಾವರಣ ಇದೆ ಎಂದು ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಬಂದಿದೆ. ನಾನು